ಆ) ಈ ಬಾಲವಾಡಿಗಳಿಗೆ ಇರುವ ಆರ್ಥಿಕ ಸಹಾಯ ಯಾವ ಪ್ರಮಾಣದಲ್ಲಿ ಇದೆ ?

ಇ) ರಾಜ್ಯದ ಎಲ್ಲಾ ಬಾಲವಾಡಿಗಳಿಗೆ ಒಂದೇ ತರಹದ ಆರ್ಥಿಕ ಸಹಾಯ ಇದೆಯೇ ?

ಈ) ಆರ್ಥಿಕ ಸಹಾಯದಲ್ಲಿ ವ್ಯತ್ಯಾಸ ಇದ್ದರೆ ಅದಕ್ಕೆ ಕಾರಣವೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ರಾಜ್ಯದಲ್ಲಿ ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಸಲಹಾ ಮಂಡಳಿಯಿಂದ ಅನುದಾನ ಪಡೆಯುತ್ತಿರುವ ಬಾಲವಾಡಿಗಳ ಸಂಖ್ಯೆ ೨೩೫.

ಆ) ರೂಪಾಯಿ ೭೨೦ ರಿಂದ ೫೦೦೦ ರೂಪಾಯಿಗಳವರೆಗೆ.

ಇ) ಇದೆ.

ಈ) ಉದ್ಭವಿಸುವುದಿಲ್ಲ.

ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯ ಪ್ರಾರಂಭಿಸುವ ಬಗ್ಗೆ.

೫೫೫. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪ್ರತಿ ಜಿಲ್ಲಾ ಕೇಂದ್ರದಲ್ಲಿ ಪದವಿಪೂರ್ವ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲಾಗಿದೆಯೇ ?

ಆ) ಹಾಗಿಲ್ಲದಿದ್ದಲ್ಲಿ ಎಲ್ಲೆಲ್ಲಿ ಪ್ರಾರಂಭಿಸಿರುವುದಿಲ್ಲ, ಪ್ರಾರಂಭಿಸದಿರುವ ಸ್ಥಳಗಳಲ್ಲಿ ಯಾವಾಗ ಪ್ರಾರಂಭಿಸಲಾಗುವುದು ?

ಇ) ರಾಜ್ಯದಲ್ಲಿರುವ ಆಶ್ರಮ ಶಾಲೆಗಳಿಷ್ಟು, ಅವುಗಳಲ್ಲಿ ವಿದ್ಯಾರ್ಥಿಗಳಿಗೆ ಯಾವ ರೀತಿ ಸೌಲಭ್ಯ ನೀಡಲಾಗುತ್ತಿದೆ ಈ ಆಶ್ರಮ ಶಾಲೆಗಳನ್ನು ಹೆಚ್ಚಿಸಲು ಸರ್ಕಾರದವರು ಉದ್ದೇಶಿಸಿರುವರೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಪ್ರತಿ ಜಿಲ್ಲಾ ಕೇಂದ್ರದಲ್ಲಿ ಪದವಿಪೂರ್ವ ತರಗತಿಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ವಿದ್ಯಾರ್ಥಿ ನಿಲಯಗಳನ್ನು (ಬೆಂಗಳೂರು ಕೇಂದ್ರ ಬಿಟ್ಟು) ಪ್ರಾರಂಭ ಮಾಡಿಲ್ಲ, ಆದರೆ, ಪ್ರತಿ ಜಿಲ್ಲೆಯಲ್ಲಿ (ಕೊಡಗು ಮತ್ತು ಉತ್ತರ ಕನ್ನಡ ಜಿಲ್ಲೆ ಹೊರತು) ಹಾಲಿ ಇರುವ ಕಾಲೇಜು ವಿದ್ಯಾರ್ಥಿ ನಿಲಯಗಳಲ್ಲಿ ಪದವಿಪೂರ್ವ ವಿದ್ಯಾರ್ಥಿಗಳಿಗಾಗಿ ಪ್ರವೇಶದ ವ್ಯವಸ್ಥೆ ಇರುತ್ತದೆ.

ಆ) ಉದ್ಭವಿಸುವುದಿಲ್ಲ.

ಇ) ೬೨ ಆಶ್ರಮ ಶಾಲೆಗಳಿವೆ, ಭೋಜನ ವೆಚ್ಚಕ್ಕಾಗಿ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ೭೫–೦೦ ರೂಗಳನ್ನು ಖರ್ಚು ಮಾಡಲಾಗುತ್ತಿದೆ.

೧ನೇ ತರಗತಿಯಿಂದ ೭ನೇ ತರಗತಿಯ ವಿದ್ಯಾರ್ಥಿಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

೧)	ಉಡುಪಿಗೋಸ್ಕರ	೫೧–೮೦ ವರ್ಷಕ್ಕೆ ಎರಡು ಜೊತೆ
೨)	ಇತರೆ ಬಾಬಿಗೆ	೧೦–೦೦ ,,
೩)	ಪುಸ್ತಕ ಮತ್ತು ಸ್ಲೇಟಿಗೆ	೧೦–೦೦ ,,
೪)	ವೈದ್ಯಕೀಯ ಭತ್ಯ	೫–೦೦ ,,
೫)	ಹಾಸಿಗೆ ಮಂತ್ರ ಹೊದಿಕೆ	೫೦–೦೦ ೨ ವರ್ಷಕ್ಕೊಮ್ಮೆ

ಆಶ್ರಮ ಶಾಲೆಗಳನ್ನು ಹೆಚ್ಚಿಸುವ ವಿಚಾರ ಸದ್ಯಕ್ಕೆ ಇಲ್ಲ.